ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 5 ಚಾಸಾ- 5**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರವಿಕುಮಾರ |
| ತಂದೆಯ ಹೆಸರುಃ | : | ಲೇಟ್ ಸಣ್ಣೇಗೌಡ |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಕಾರ್ಯನಿರ್ವಾಹಕ ಅಧಿಕಾರಿ |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 14-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 06-11-2015 ರಿಂದ 31-7-2017ರವರೆಗೆ ನಾನು ಸಕಲೇಶಪುರ ತಾಲ್ಲೂಕು ಪಂಚಾಯ್ತಿಯ ಇಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 20-6-17ರಂದು ಹಾಸನ ಎಸಿಬಿಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ ಪಿ ಮನು ಮತ್ತು ಸೌಮ್ಯಾರವರ ಸೇವಾ ವಿವರವನ್ನು ನೀಡುವಂತೆ ಪತ್ರ ಕಳುಹಿಸಿದ್ದರು. ಅದರಂತೆ ದಿನಾಂಕ 7-7-2017ರ ನಿಪಿ-42 ರ ಪತ್ರದೊಂದಿಗೆ ಸದರಿ ಮಾಹಿತಿಯನ್ನು ದಾಖಲೆಗಳೊಂದಿಗೆ ಸಲ್ಲಿಸಿರುತ್ತೇನೆ. ನಿಪಿ-42ರಲ್ಲಿ ನನ್ನ ರುಜು ಇದ್ದು ನಿಪಿ-42(ಎ) ಎಂದು ಗುರುತಿಲಾಯಿತು. ಆ ಮಾಹಿತಿಯನ್ನು ಈಗ ನೋಡುತ್ತಿದ್ದು ಅದು ಒಟ್ಟು 20 ಹಾಳೆಗಳನ್ನೊಳಗೊಂಡಿರುತ್ತದೆ, ಅವುಗಳನ್ನು ಒಟ್ಟಾಗಿ ನಿಪಿ-43 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1ನೇ ಆರೋಪಿ ಪರ ಶ್ರೀ ಕೆ ಎ ಎಸ್ ವಕೀಲರಿಂದಃ**

ಈ ಪ್ರಕರಣದಲ್ಲಿ ನನ್ನ ಹೇಳಿಕೆಯನ್ನು ಎಸಿಬಿ ಪೊಲೀಸರು ಮಾಡಿಕೊಂಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪಿಡಿಒ ಸತೀಶ್ ಮತ್ತು ಕಂಪ್ಯೂಟರ್ ಆಪರೇಟರ್ ರವರು ಲಂಚ ಕೇಳಿದ್ದರು ಎಂಬ ಆಪಾದನೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡಿಲ್ಲ. ಸತೀಶ್ ರವರಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ದೃಢೀಕರಿಸಿ ನೀಡಿಲ್ಲ.

**ಪಾಟೀಸವಾಲುಃ 2ನೇ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**